ನಾನು ನಿಮ್ಮ ಪ್ರಶ್ನೆ ಬರುವುದಕ್ಕಿಂತ ಮುಂಚೆ, ಕೂಡಲೇ ಈ ಕಾಲೇಜಿಗೆ ಸ್ಥಳವನ್ನು ಒದಗಿಸಬೇಕೆಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಸಧ್ಯಕ್ಕೆ ಈ ಕಾಲೇಜು ಮೂಡಾ ಕಟ್ಟಡದಲ್ಲಿ ನಡೆಯುತ್ತಿದೆ. ನನಗೆ ಗೊತ್ತಿರುವ ಹಾಗೆ ಮೂಡಾ ಬಿಲ್ಡಿಂಗ್ ಬಹಳ ದೊಡ್ಡದು ಇದೆ. ಅಲ್ಲಿ ಕಾಲೇಜು ನಡೆಯುತ್ತಿದೆ. ತಮ್ಮ ಕಳಕಳಿಯನ್ನು ಅರ್ಥಮಾಡಿಕೊಂಡು ಇವತ್ತೇ ಡಿಸ್ಟ್ರಿಕ್ಟ್ ಅಥಾರಿಟಿಯವರಿಗೆ ಹೇಳಿ ಕೂಡಲೇ ನಿಮಗೆ ಜಾಗವನ್ನು ಕೊಡಿಸತಕ್ಕಂತಹ ಕೆಲಸವನ್ನು ಮಾಡುತ್ತೇನೆ. ಇದರ ಜೊತೆಗೆ ತಾವು ಕೂಡ ಜಿಲ್ಲಾಧಿಕಾರಿಯವರ ಹತ್ತಿರ ಸಹಕರಿಸಬೇಕು ಎನ್ನುವ ವಿಚಾರವನ್ನು ಸೂಚ್ಯವಾಗಿ ನಿಮಗೆ ತಿಳಿಸುತ್ತಿದ್ದೇನೆ. ಈ ವಿಚಾರ ತಮಗೆ ಗೊತ್ತಿದೆ

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಧನ್ಯವಾದಗಳು. ಬರೀ ಜಾಗವನ್ನು ಕೊಟ್ಟರೆ ಸಾಲದು ಕಟ್ಟಡವೂ ಸಹ ಆಗಬೇಕು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದಕ್ಕೆ ಹಣವನ್ನು ಮಂಜೂರು ಮಾಡಬೇಕು.

ಒಂದರಿಂದ ಏಳನೇ ತರಗತಿವರೆಗೆ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಿಕ್ಷಣ ನೀಡುವುದು

233(1527)

ಶ್ರೀ. ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ 1ನೇ ತರಗತಿಯಿಂದ 7ರ ವರೆಗೆ ಕನ್ನಡ ಮಾಧ್ಯಮ ಮಾಡಲು ಸರ್ಕಾರ ಯೋಚಿಸಿದೆಯೇ ?

ಆ) ಹಾಗಿದ್ದಲ್ಲಿ , ಈಗಾಗಲೇ ಇಂಗ್ಲೀಷ್ ಮತ್ತು ಇತರೆ ಮಾಧ್ಯಮಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ .ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಮತ್ತು ಆ) ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ. ಅರಗ ಜ್ಞಾನೇಂದ್ರ :- ರಾಜ್ಯದಲ್ಲಿ ಒಂದನೇ ತರಗತಿಯಿಂದ 7ರವರೆಗೆ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುತ್ತೇವೆಂದು ಇತ್ತೀಚೆಗೆ ಮಾನ್ಯಸಚಿವರು ಎಲ್ಲಾ ಕಡೆ ಹೇಳುತ್ತಿದ್ದಾರೆ. ಇದರ ಪ್ರಚಾರದಿಂದ ಸಾಕಷ್ಟು ಜನ ಪೋಷಕರು ಗೊಂದಲಕ್ಕೆ ಒಳಗಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 3000ಕ್ಕಿಂತ ಹೆಚ್ಚು ಕನ್ನಡ ಮಾಧ್ಯಮವಲ್ಲದ ಶಾಲೆಗಳು ಕಾರ್ಯನಿರ್ವಹಿಸುತ್ತಿದೆ ಎನ್ನುವುದನ್ನು ನಾವು ಕೇಳಿದ್ದೇವೆ. ಇಂತಹ ಸಂದರ್ಭದಲ್ಲಿ 7ನೇ ತರಗತಿಯವರೆಗೆ ಏಕಾಏಕಿಯಾಗಿ ಕನ್ನಡವನ್ನು ಕಡ್ಡಾಯ ಮಾಡಿದರೆ 5ಮತ್ತು 6ನೇ ತರಗತಿಯವರಿಗೆ ಬೇರೆ ಬೇರೆ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆದಿರತಕ್ಕಂತಹ ಮಕ್ಕಳಿಗೆ ಏನು ವ್ಯವಸ್ಥೆಯನ್ನು ಮಾಡಬೇಕೆಂದು ಯೋಚನೆ ಮಾಡಿದ್ದೀರಿ ಎನ್ನುವಂತದ್ದು ನನ್ನ ಪ್ರಶ್ನೆ. ಸೆಂಟ್ರಲ್ ಸಿಲಬಸ್‌ನಲ್ಲಿ ಓದುತ್ತಿರುವಂತಹ ಮಕ್ಕಳಿಗೆ, ಬೇರೆ ಬೇರೆ ರಾಜ್ಯದಿಂದ ಬಂದಿರತಕ್ಕಂತಹ ಮಕ್ಕಳಿಗೆ ಯಾವ ಸೌಲಭ್ಯವನ್ನು ಇದರಲ್ಲಿ ವಿಸ್ತರಿಸುತ್ತೀರಿ ಎಂಬುದನ್ನು ಕೂಡ ತಾವು ಹೇಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ .ಹೆಚ್. ಜಿ. ಗೋವಿಂದೇ ಗೌಡ :- ಮಾನ್ಯ ಸಭಾಧ್ಯಕ್ಷರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ ॥ ಚಂದ್ರಶೇಖರ ಪಾಟೀಲರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿರುತ್ತೇವೆ. ಆ ಸಮಿತಿಯು ಒಂದರಿಂದ 7ರವರೆಗೆ ಮಾತೃಭಾಷೆ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುವಂತೆ

ವರದಿಯನ್ನು ನೀಡಿದ್ದಾರೆ. ಈ ವರದಿಯನ್ನು ಅವರು ನಮಗೆ ಕೊಟ್ಟಿದ್ದಾರೆ. ಆ ವರದಿಯನ್ನು ಕೊಟ್ಟ ತಕ್ಷಣ ಅದನ್ನು ಜಾರಿಗೆ ತರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನೊಳಗಡೆ ಲಾ ಡಿಪಾರ್ಟಮೆಂಟ್‌ಗೆ ಅದನ್ನು ರೆಫರ್ ಮಾಡಿದ್ದೇವೆ. ಲಾ ಡಿಪಾರ್ಟಮೆಂಟ್‌ನಿಂದ ಓಪಿನಿಯನ್‌ನ್ನು ತೆಗೆದುಕೊಂಡ ಮೇಲೆ ಅದನ್ನು ಕ್ಯಾಬಿನೆಟ್‌ನಲ್ಲಿ ತಂದು, ಅದು ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಪಡೆದ ನಂತರ ಇದು ಜಾರಿಗೆ ಬರುತ್ತದೆ. ಈಗಲೇ ಅದು ಜಾರಿಗೆ ಬರುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಇದನ್ನು ಕೂಡಲೇ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಇನ್ನೊಂದು ಮಾತನ್ನು ತಾವು ಏನು ಹೇಳಿದ್ದಿರಿ, ಯಾವಮಕ್ಕಳಿಗೂ ತೊಂದರೆಯಾಗದ ರೀತಿಯಲ್ಲಿ ನಾವು ಸರ್ಕಾರ ನಡೆಸಬೇಕೆಂದು ಉದ್ದೇಶ ಇರುವಂತದ್ದು. ಈ ಮೇಲ್ಪಂಕ್ತಿಯಲ್ಲಿ ನಾವು ಕಾನೂನನ್ನು ಮಾಡಿರುವುದರಿಂದ ಯಾರಿಗೂ ಅನಾನುಕೂಲವಾಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸದಾನಂದಗೌಡರೆ, ಮಾನ್ಯಮಂತ್ರಿಗಳು ಪ್ರಶ್ನೆ ಸಂಖ್ಯೆ : 234(1525)ಕ್ಕೆ ಸಮಯ ಕೇಳಿದ್ದಾರೆ. ಈ ಅಧಿವೇಶನದೊಳಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ. ಡಿ. ವಿ. ಸದಾನಂದಗೌಡ : ಮಾನ್ಯಅಧ್ಯಕ್ಷರೆ , ತಮ್ಮಲ್ಲಿ ನಾನು ಕೇಳುತ್ತಿದ್ದೇನೆ ನನ್ನ ಮೊದಲನೆಯ ಪ್ರಶ್ನೆ ರಾಜ್ಯದಲ್ಲಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು ಎಂಬುದು. ಆವೊಂದು ಅಂಕಿಅಂಶಗಳು ಇಲ್ಲವೇ ? ನನ್ನ ಎರಡನೆಯ ಪ್ರಶ್ನೆ ಸ್ಯಾಪ್‌ಗ್ಯಾಪ್ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಈ ಹುದ್ದೆಗಳಲ್ಲಿ ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ? ಎಷ್ಟು ಸಾರಿ ಈ ವಿಷಯ ಚರ್ಚೆಯಾಗಿದೆ ? ಸರ್ಕಾರ ಇದರ ಬಗ್ಗೆ ಯಾವ ತೀರ್ಮಾನಕ್ಕೆ ಬಂದಿದೆ ಅಥವ ಇಲ್ಲ ಎನ್ನುವುದನ್ನು ಹೇಳುವುದಕ್ಕೆ ಇವರಿಗೆ ಸಮಯಬೇಕಾ ? Doesn't this Government possess that much of particulars ?

ಅಧ್ಯಕ್ಷರು : ತಮ್ಮ ಮೊದಲನೆಯ ಪ್ರಶ್ನೆ ಸರಿಯಿದೆ. ಅದಕ್ಕೆ ಅಂಕಿಅಂಶಗಳು ಇರುತ್ತವೆ, ಕೊಡುತ್ತಾರೆ. ತಮ್ಮ ಎರಡು ಮತ್ತು ಮೂರನೆಯ ಪ್ರಶ್ನೆಗೆ ಉತ್ತರ ಪಾಲಿಸಿ ಮ್ಯಾಟರ್. ಅವರನ್ನು ರೆಗ್ಯುಲರೈಸ್ ಮಾಡುತ್ತಾರೋ ಅಥವ ಪೋಸ್ಟಿಂಗ್ ಕೊಡುತ್ತಾರೋ ಯಾವ ಡೇಟಿನಿಂದ ಕೊಡುತ್ತಾರೆನ್ನುವುದು probably the matter must be under the consideration of the government.They have sought for time.ನಾನು ತಮಗೆ ವಿಶ್ವಾಸವನ್ನು ಕೊಡುತ್ತೇನೆ. Rule does not permit the question to be answered partly. I will get you the reply.

ನೀವು ಕೇಳಿರತಕ್ಕ ಪ್ರಶ್ನೆಗೆ ಒಂದು ಭಾಗಕ್ಕೆ ಉತ್ತರ ಕೊಟ್ಟು ಇನ್ನೊಂದು ಭಾಗಕ್ಕೆ ಆಮೇಲೆ ಉತ್ತರ ಕೊಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಮಂತ್ರಿಗಳು ಸಮಯ ಕೇಳಿದ್ದಾರೆ. ಈ ಅಧಿವೇಶನದೊಳಗೆ ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಕರ ಸೀನಿಯರ್ ಗ್ರೇಡ್ -1 ಹುದ್ದೆ ಸೃಷ್ಟಿಸುವುದು.

237(1572)

ಶ್ರೀ. ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.